ತೆಗೆದುಕೊಳ್ಳಬಹುದೇ ಹೊರತಾಗಿ ಈಗ ಆಗಿರುವುದರ ಬಗ್ಗೆ ಏನು ಮಾಡಲಿಕ್ಕೂ ಬರುವುದಿಲ್ಲ. ಆ ಪರತ್ತಿನ ಮೇಲೆ ಇವತ್ತಿನ ದಿವಸ ಒಪ್ಪಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ಡಿ. ಟಿ. ಜಯಕುಮಾರ್ ಆಬ್ಸೆಂಟ್. ಐ. ಬಿ. ಶಂಕರ್ ನೆಕ್ಸ್ಟ್.

ಶ್ರೀ ಐ. ಬಿ. ಶಂಕರ್, —ಆರ್ಜಿ ಕೊಡುವುದು ಲೇಟ್ ಆದರೂ ಕೂಡಾ ಅದನ್ನು ವಜಾ ಮಾಡುತ್ತೀರಿ, ಅಂಥದ್ದರಲ್ಲಿ ನೀವು ಬಿಲ್ಡಿಂಗನ್ನು ಕೊಡುವುದಕ್ಕೆ ಮೂರು-ನಾಲ್ಕು ವರ್ಷ ತಡ ಮಾಡಿಬಿಟ್ಟಿದ್ದೀರಿ. ಅದರ ಭಾರವೆಲ್ಲಾ ಆ ಬಡ ಪಾಪಿಗಳ ತಲೆಮೇಲೆ ಹಾಕುವುದು ಅನ್ಯಾಯ. ಯಾವ ರೇಟ್‌ನಲ್ಲಿ ಕಂಟ್ರಾಕ್ಟರ್ ಅದನ್ನು ವಹಿಸಿಕೊಂಡಿದ್ದಾರೋ ಅದೇ ರೇಟ್‌ನಲ್ಲಿ ಬಡವರಿಗೆ ಮನೆಯನ್ನು ಕಟ್ಟಿಸಿಕೊಡಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಎಂ. ಚಂದ್ರಶೇಖರ್.—ಅದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಹಿಂದೆ ಆಗಿರುವಂಥದ್ದಕ್ಕೆ ಪರಿಶೀಲನೆ ಮಾಡಬೇಕು, ಅದು ಸಭ್ಯದಲ್ಲಿ ಆಗುವುದಿಲ್ಲ.

ಶ್ರೀ ವೇದಾಂತ ಹೆಬ್ಬಿಗೆ.—ಒಂದು ತಂಡಕ್ಕೆ ೬೦ ಸಾವಿರ ರೂಪಾಯಿಯಿಂದ ೮೦ ಸಾವಿರಕ್ಕೆ ಹೆಚ್ಚು ಮಾಡಿದ್ದೀರಿ. ಈಗ ಅದು ೮೦ ಸಾವಿರ ರೂಪಾಯಿ ಆಗುತ್ತದೆ. ಎರಡನೇ ತಂಡಕ್ಕೆ ೬೦ ಸಾವಿರ ರೂಪಾಯಿ ಜೊತೆಗೆ ೩೨ ಸಾವಿರ ರೂಪಾಯಿ ಹೆಚ್ಚು ಮಾಡಿದ್ದೀರಿ. ಈಗ ಅದು ೯೨ ಸಾವಿರ ರೂಪಾಯಿ ಆಗುತ್ತದೆ. ತಾವು ಹೇಳಿದ ಹಾಗೆ ಮಾನ್ಯ ವಸತಿ ಮಂತ್ರಿಯವರು ೯-೧೦-೧೯೮೭ ರಂದು ಅಪ್ಪೊತ್ತಿನ ದಿವಸ ಹೌಸಿಂಗ್ ಬೋರ್ಡ್ ಸಮಾರಂಭದಲ್ಲಿ

> "He said he had issued clear instructions to the KHB not to enhance the cost of houses after their construction once the cost was announced at the timing of calling applications. If the Board has to incur additional expenditure above the original cost, that has to be borne by the Board itself or by the engineers concerned and the contractors. This measure was necessary to see that the time schedule was strictly maintained"

ಎಂದು ಹೇಳಿದ್ದಾರೆ, ಇಲ್ಲಿ ೪೭೬ ಮನೆಗಳನ್ನು ಒಬ್ಬರೇ ಕಂಟ್ರಾಕ್ಟ್‌ದಾರರು ಕಟ್ಟಲಿಕ್ಕೆ ಸಾಧ್ಯ ಇದೆಯೇ ಹಣಕಾಸಿನ ಶಕ್ತಿ ಇದೆಯೇ ಎಂದು ಯೋಚನೆ ಮಾಡಬೇಕು. Otherwise the house has to be divided between 5 or 6 or 7 or 8 contractors. ಅದು ಯಾವಾಗ ಎಸ್ಕಲೇಷನ್ ಆಗುತ್ತದೆ. ಆಪನಿಗೆ ಮನೆ ಕೊಟ್ಟುವುದಕ್ಕೆ ದುಡ್ಡು ಇರುವುದಿಲ್ಲ. ೧೦ ಮನೆ ಕಟ್ಟುತ್ತಾನೆ, ಒಂದೊಂದೇ ಬಿಲ್ ಕೊಡುತ್ತಾನೆ. ಮುಂದೆ ನೀವು ಸೂರಾರು ಮನೆಗಳನ್ನು ಕಟ್ಟಬೇಕಾದರೆ ಆ ಕೆಲಸವನ್ನು ಕಂಟ್ರಾಕ್ಟ್‌ದಾರರು ಒಬ್ಬರಿಗೆ ಕೊಡಬಾರದು ಬೈ ಸೂರಿನಲ್ಲಿ ಬೇಕಾದರೆ ತೋರಿಸುತ್ತೇನೆ. ೪ ವರ್ಷ ಆಗಿದೆ, ನಾನು ನೋಡಿಕೊಂಡು ಬಂದಿದ್ದೇನೆ, ಕಿಟಕಿ ಇಲ್ಲ. ಬಾಗಿಲು ಇಲ್ಲ. ನೀವು ದರಗಳನ್ನು ಜಾಸ್ತಿ ಮಾಡುವಾಗ ೫ ಪರ್ಸೆಂಟ್ ೧೦ ಪರ್ಸೆಂಟ್ ಜಾಸ್ತಿ ಕೊಡುವುದಕ್ಕೆ ಅವರಿಗೆ ಸಾಧ್ಯವಿದೆ. ಈ ರೀತಿ ಎರಡ್ಮೂರು ಬಿಲ್ಡಿಂಗ್ ಜಾಸ್ತಿ ಮಾಡಬೇಡಿ, ಹಾಗೂ ಅವರಿಗೆ ತೊಂದರೆ ಕೊಡಬೇಡಿ. ಯಾವುದಾದರೂ ಒಂದು ರಿಯಾಯಿತಿಯನ್ನು ತೋರಿಸಿ ಅವರ ಪಾಸಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಿಕೊಡಬೇಕೆಂಬ ಕಳಕಳಿಯನ್ನು ಮಾನ್ಯ ಮಂತ್ರಿಗಳು ತಳೆಯಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ಉಳಿದ ಕಾಮಗಾರಿಗಳೂ ಇವೆ. ಅದಕ್ಕಾಗಿ ವಿಶೇಷ ಮಂಡಳಿಗೆ ತಿಳಿಸಿ ಆದಷ್ಟು ಜಾಗ್ರತೆ ಸ್ವಾಧೀನಕ್ಕೆ ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ವಾಡಿಯಲ್ಲಿ ಮೈಸೂರು ಸಿಮೆಂಟ್ಸ್‌ನ ಥರ್ಮಲ್ ಪ್ಲಾಂಟನ್ನು ನಿಲ್ಲಿಸಿದ ಪರಿಣಾಮವಾಗಿ ಕಾರ್ಮಿಕರಿಗೆ ತೊಂದರೆಯಾಗಿರುವುದು.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ವಾಡಿಯಲ್ಲಿನ ಮೈಸೂರು ಸಿಮೆಂಟ್ಸ್ ಲಿಮಿಟೆಡ್‌ನ ಥರ್ಮಲ್ ಪವರ್ ಪ್ಲಾಂಟನ್ನು ನಿಲ್ಲಿಸಿ ಅಲ್ಲಿದ್ದ ಯಂತ್ರಗಳನ್ನು ಬೇರೆ ಕಡೆಗೆ ವರ್ಗಾಯಿಸುತ್ತಿರುವುದರಿಂದ ಅಲ್ಲಿನ ೧೫೦ ಜನ ಕಾರ್ಮಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಭಾರೀ ಮತ್ತು ಮಧ್ಯಮ ಕೈಗಾರಿಕೆಗಳ ಹಾಗೂ ವಿದ್ಯುತ್ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಇಲಾಖೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಉತ್ತರ ಇಂಗ್ಲೀಷ್ ಭಾಷೆಯಲ್ಲಿದೆ, ದಯವಿಟ್ಟು ಕ್ಷಮಿಸಬೇಕು, ಅದನ್ನು ಓದುತ್ತೇನೆ.

During 1979, permission for installing 10 MW Themal set at Wadi has been given. It is reportedly derated and presently generating only 5 MW.

On 6-4-80 Power supply with Acon Contract demand of 550 KVA has been serviced at Wadi for axuliary use of the Thermal generating Station by K.E.B.

Subsequently Generator sete have been permitted to be installed as noted below, at Mysore Cemants, Ammasandara:

2 × 3200 KWS	... During	1984-85	... DG sets
1 × 1187 KVA	... During	1985-86	... DG sets
1 × 6650 KVA	...	25-4-87	... DG sets

In view of their improved power generation at Ammasandra, they might be thinking of closing down their old thermal plant at Wadi. However, K.E.B. has made all arrangements to wheel porwer genrated at Wadi to their Cement Plant at Ammasandra, and K.E.B. and Government have no information about the closing down of their Cement plant at Wadi.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವಂತೆ ನನ್ನ ಕ್ಷೇತ್ರವಾದ ಹಹಬಾದ್‌ನಲ್ಲಿ ಎ.ಬಿ.ಎಲ್. ಕಾರ್ಖಾನೆ ಇದೆ. ಅಲ್ಲಿ ಕೆಲಸ ಮಾಡುವವರಿಗೆ ಕಳೆದ ಎರಡು ವರ್ಷಗಳಿಂದ ಪೇಮೆಂಟ್ ಕೆಡದ ಕಾರಣ ಆ ಜನರು ಸಾಯುತ್ತಿದ್ದಾರೆ. ವಾಡಿ ನಮ್ಮ ಹಹಬಾದ್‌ಗೆ ೬ ಕಿಲೋಮೀಟರ್ ದೂರವಲ್ಲಿದೆ. ಅಲ್ಲಿ ಮಾನ್ಯ ಮಂತ್ರಿಗಳು ಇಲ್ಲಿ ಹೇಳಿರುವ ಪ್ರಕಾರ ೧೦ ಎಂ.ವಿ. ಸಾಮರ್ಥ್ಯದ ಒಂದು ಥರ್ಮಲ್ ಪ್ಲಾಂಟ್‌ನ್ನು ೧೯೭೯ರಲ್ಲಿ ಮೈಸೂರು ಸಿಮೆಂಟ್ಸ್ ಲಿಮೆಟೆಡ್‌ನವರು ಸ್ಥಾಪನೆ ಮಾಡಿದರು. ಇಲ್ಲಿ ಉತ್ಪಾದನೆಯಾದ ವಿದ್ಯುತ್‌ನ್ನು ಅವರು ಕೆ.ಇ.ಬಿ.ಗೆ ಕೊಡುತ್ತಿದ್ದರು. ಇದಕ್ಕೆ ಬದಲಾಗಿ ಕೆ.ಇ.ಬಿ. ನವರು ಅಮ್ಮಸಂದ್ರದಲ್ಲಿರುವ ಇವರ ಸಿಮೆಂಟ್ ಫ್ಯಾಕ್ಟರಿಗೆ ವಿದ್ಯುತ್‌ನ್ನು ಒದಗಿಸುತ್ತಿದ್ದರು. ಈಗ ವಾಡಿಯಲ್ಲಿನ ಮೈಸೂರು ಸಿಮೆಂಟ್ಸ್ ಲಿಮಿಟೆಡ್‌ನ ಥರ್ಮಲ್ ಪವರ್ ಪ್ಲಾಂಟನ್ನು ನಿಲ್ಲಿಸುವ ಬಗ್ಗೆ they have already served the closure notice to the Government of Karnataka and Labour and Social Welfare Department. ಆದರೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಈ ಬಗ್ಗೆ ತಮಗೇನೂ ಗೊತ್ತಿಲ್ಲ ಎಂದು ಹೇಳುತ್ತಿದ್ದಾರೆ. ಅವರು ನೋಟೀಸ್ ಕೊಟ್ಟಿದ್ದರೂ ಸಹ ಈ ರೀತಿ ಉತ್ತರ ಕೊಡಲು ಕಾರಣವೇನು ? ಈ ಒಂದು ಪವರ್ ಪ್ಲಾಂಟ್‌ನಿಂದ ವಾಯು ಮಾಲಿನ್ಯ ಉಂಟಾಗುತ್ತಿದೆ, ಇದರಿಂದ ಜನರ ಆರೋಗ್ಯ ಕೆಡುತ್ತದೆ ಎಂದು ಶಾಂತಿಕುಮಾರ್ ಎಂಬುವರು ಹೈಕೋರ್ಟಿನಲ್ಲಿ ರಿಟ್ ಹಾಕಿದರು.

ನಂತರ ಹೈಕೋರ್ಟಿನವರು ಸಂಬಂಧಪಟ್ಟವರಿಗೆ ಹೊಗೆ ಬರದಂತೆ ನೋಡಿಕೊಳ್ಳಬೇಕು ಎಂದು ಸೂಚನೆ ಕಳುಹಿಸಿಕೊಟ್ಟರು. ಈ ಶಾಂತಿಕುಮಾರ್ ಮತ್ತು ಬಿರ್ಲಾ ಕಂಪನಿಯವರು ಒಂದೇ ಗುಂಪಿಗೆ ಸೇರಿದ ಜನರು. ಆದ್ದರಿಂದ ೧೯೭೯-೮೦ ರಲ್ಲಿ ಈ ಶಾಂತಿಕುಮಾರ್ ಎಂಬುವರಿಗೆ ಇದೇ ಬಿರ್ಲಾ ಕಂಪನಿಯವರು ನಿಮಗೆ ಪರ್ಸನಲ್ ಮೇನೇಜರ್ ಪೋಸ್ಟ್ ಕೊಡುತ್ತೇವೆಂದು ಹೇಳಿ, ಕೋರ್ಟಿನಲ್ಲಿ ವಾಯುಮಾಲಿನ್ಯದ ಬಗ್ಗೆ ರಿಟ್ ತಾಕುವಂತೆ ಕೇಳಿಕೊಂಡಿದ್ದಾರೆ. ಏಕೆಂದರೆ, ಆವರಿಗೆ ಈ ಪವರ್ ಪ್ಲಾಂಟ್ ಮುಚ್ಚಲು ಏನಾದರೂ ಒಂದು ಕಾರಣ ಬೇಕಾಗಿತ್ತು. ಅದಕ್ಕಾಗಿ ಕೋರ್ಟಗೆ ಕಳುಹಿಸಿದರು.

ಅಧ್ಯಕ್ಷರು.—ತಾವು ಭಾಷಣ ಮಾಡಬೇಡಿ. ವಿವರಣೆ ಕೇಳಿ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಮಂತ್ರಿಗಳು ಇದನ್ನು ಮುಚ್ಚುವ ವಿಚಾರದಲ್ಲಿ ತಮಗೇನೂ ಗೊತ್ತಿಲ್ಲ ಎಂದು ಹೇಳಿದ್ದಾರೆ. ಇದನ್ನು ಮುಚ್ಚಿಬಿಟ್ಟರೆ ೧೫೦ ಜನ ಕಾರ್ಮಿಕರಿಗೆ ತೊಂದರೆಯಾಗುತ್ತದೆ. ಹೊಗೆ ಬರದಂತೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕೆಂದು ಪಲ್ಯೂಷನ್ ಬೋರ್ಡಿನವರು ಸೂಚನೆ ಕೊಟ್ಟಿದ್ದಾರೆ. ಆದರೆ ಅವರು ಆ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಬದಲು ಥರ್ಮಲ್ ಪವರ್ ಪ್ಲಾಂಟ್‌ನ್ನೇ ಮುಚ್ಚಲು ಹೊರಟಿದ್ದಾರೆ. ಇದರಿಂದ ಅಲ್ಲಿ ಕೆಲಸ ಮಾಡುತ್ತಿರುವ ೧೫೦ ಜನ ಕಾರ್ಮಿಕರಿಗೆ ಕೆಲಸ ಹೋಗುತ್ತದೆ. ಆದ್ದರಿಂದ ಅವರನ್ನು ಸರ್ಕಾರವೇ ಸಂರಕ್ಷಣೆ ಮಾಡಬೇಕು. ಈಗ ನಮ್ಮ ರಾಜ್ಯದಲ್ಲಿ ವಿದ್ಯುತ್ ಕೊರತೆ ಇದೆ ಎಂದು ಸರ್ಕಾರದವರು ಹೇಳುತ್ತಿರುವಾಗ, ಇದನ್ನು ಸಹ ಸರ್ಕಾರದವರೇ ವಹಿಸಿಕೊಂಡು ಏತಕ್ಕೆ ನಡೆಸಬಾರದು ? ಇದನ್ನು ಬಿರ್ಲಾ ಅವರಿಂದ ವಹಿಸಿಕೊಂಡು ಕೆ.ಇ.ಬಿ. ನವರೇ ಏತಕ್ಕೆ ನಡೆಸಬಾರದು ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಈ ವಿಚಾರದಲ್ಲಿ ಕೆಲವೊಂದು ವಿಚಾರಗಳು ನಮ್ಮ ಗಮನಕ್ಕೆ ಬಂದಿವೆ. ಆದರೆ ಇದನ್ನು ಮುಚ್ಚುವ ವಿಚಾರದಲ್ಲಿ ಅವರು ಕೆ.ಇ ಬಿ. ಆಗಲೀ ಅಥವಾ ಸರ್ಕಾರ ಕ್ಯಾಗಲೀ ನೋಟೀಸ್ ಕೊಟ್ಟಿಲ್ಲ ಎಂದು ನಾನು ಹೇಳಿದ್ದು. ಈಗ ವಾಡಿಯ ಥರ್ಮಲ್ ಪವರ್ ಪ್ಲಾಂಟ್‌ನಲ್ಲಿ ಏನು ವಿದ್ಯುತ್‌ನ್ನು ಅವರು ಉತ್ಪಾದನೆ ಮಾಡುತ್ತಿದ್ದಾರೆ, ಅದನ್ನು ನಾವು ಪಡೆದುಕೊಂಡು ಬೇರೆಯವರಿಗೆ ಸರಬರಾಜು ಮಾಡುತ್ತಿದ್ದೇವೆ. ಇದಕ್ಕೆ ಬದಲಾಗಿ ನಾವು ಅಮ್ಮಸಂದ್ರದ ಸಿಮೆಂಟ್ ಫಾಕ್ಟರಿಗೆ ಬೇರೆ ಕಡೆಯಿಂದ ವಿದ್ಯುತ್‌ನ್ನು ಒದಗಿಸುತ್ತಿದ್ದೇವೆ. ಇದರಿಂದ ನಮಗೆ ಯಾವ ತರಹದ ತೊಂದರೆಯೂ ಆಗಿಲ್ಲ ಆದರೆ ಅವರು ಯಾವುದೋ ಕಾರಣಗಳನ್ನು ಹೇಳಿ ವಾಡಿಯಲ್ಲಿರುವ ಥರ್ಮಲ್ ಪವರ್ ಪ್ಲಾಂಟ್‌ನ್ನು ಮುಚ್ಚಲು ಹೊರಟಿದ್ದಾರೆ. ಈ ಪವರ್ ಪ್ಲಾಂಟ್ ಬಹಳ ಹಳೆಯ ಪ್ಲಾಂಟ್. ಇದರಿಂದ ಅಲ್ಲಿ ಹೆಚ್ಚು ವಿದ್ಯುತ್‌ನ್ನು ಉತ್ಪಾದನೆ ಮಾಡಲು ಸಾಧ್ಯವಾಗುವುದಿಲ್ಲ ಎಂದು ತಿಳಿದುಕೊಂಡು ಅದನ್ನು ಮುಚ್ಚಲು ಅವರು ಬೇರೆಬೇರೆ ಕಾರಣಗಳನ್ನು ಹುಡುಕುತ್ತಿರಬಹುದು. ಅದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಈ ಪವರ್ ಪ್ಲಾಂಟ್‌ನಿಂದ ವಾಯುಮಾಲಿನ್ಯವಾಗುತ್ತಿದೆ ಎಂದು ಯಾರಾದರು ಪಲ್ಯೂಷನ್ ಬೋರ್ಡಿನವರಿಗೆ ಕಂಪ್ಲೈಂಟ್ ಕೊಟ್ಟರೆ, ಆ ಬೋರ್ಡಿನವರು ಅಲ್ಲಿಗೆ ಹೋಗಿ ನೋಡಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ತಿಳಿಸುತ್ತಾರೆ. ಆದ ರಿಂದ ಈ ಒಂದು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡು ಅವರು ಎಷ್ಟೇ ವಿದ್ಯುತ್‌ನ್ನು ಉತ್ಪಾದಿಸಿದರೂ ಸಹ ಅದನ್ನು ನಾವು ಕೊಂಡುಕೊಳ್ಳಲು ತಯಾರಿದ್ದೇವೆ. ಆದರೆ ಅವರು ಬೇರೆ ಯಾವುದೋ ಕಾರಣ ಇಟ್ಟುಕೊಂಡು ಅದನ್ನು ಮುಚ್ಚುತ್ತೇವೆಂದರೆ. ಅದಕ್ಕೆ ನಾವು ಅವಕಾಶ ಕೊಡುವುದಕ್ಕಾಗುವುದಿಲ್ಲ. ಈಗ ನಮಗೆ ವಿದ್ಯುತ್‌ನ ಕೊರತೆ ಬಹಳಷ್ಟಿದೆ. ಈ ಕಾರಣದಿಂದ ಅದನ್ನು ಮುಚ್ಚುವುದಕ್ಕೆ ನಮ್ಮ ಸರ್ಕಾರ ಮತ್ತು ಕೆ.ಇ.ಬಿ. ಏನೇನು ಪ್ರಯತ್ನ ಮಾಡಬೇಕೋ ಅದನ್ನೆಲ್ಲಾ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಇದರಲ್ಲಿ ಬಹಳ ಗಹನವಾದ ವಿಷಯಗಳು ಅಡಕವಾಗಿವೆ. ಏನೆಂದರೆ, ಇವರು ತಮ್ಮ ಅಮ್ಮಸಂದ್ರ ಸಿಮೆಂಟ್ ಫ್ಯಾಕ್ಟರಿಗೆ ಬೇಕಾದ ಪವರ್ ಸಲುವಾಗಿ ವಾಡಿಯಲ್ಲಿ ಥರ್ಮಲ್ ಪವರ್ ಪ್ಲಾಂಟನ್ನು ಸ್ಥಾಪನೆ ಮಾಡಿದರು. ಇದು ಸ್ಥಾಪನೆಯಾದ ಮೇಲೆ ಅಲ್ಲಿ ಉತ್ಪಾದನೆಯಾದ ವಿದ್ಯುತ್‌ನ್ನು ಕೆ.ಇ.ಬಿ.ನವರು ಪಡೆದುಕೊಂಡು, ಇಲ್ಲಿ ಅಮ್ಮಸಂದ್ರ ಸಿಮೆಂಟ್ ಫ್ಯಾಕ್ಟರಿಗೆ ಬೇಕಾದ ವಿದ್ಯುತ್‌ನ್ನು ಸರಬರಾಜು ಮಾಡಬೇಕು ಎಂದು ಒಂದು ಒಪ್ಪಂದ ಆಗಿದೆ. ಈ ರೀತಿ ಒಪ್ಪಂದ ಆಗಿರುವುದರಿಂದ ಅವರು ತಮ್ಮನ್ನು ಕೇಳದೆ ನಾಡಿಯಲ್ಲಿರುವ ಥರ್ಮಲ್ ಪವರ್ ಪ್ಲಾಂಟ್‌ನ ಉತ್ಪಾದನೆಯನ್ನು ನಿಲ್ಲಿಸುವುದಕ್ಕೆ ಅವಕಾಶ ಇದೆಯೇ ? ಈ ವಿಚಾರದಲ್ಲಿ ಕೆ. ಇ. ಬಿ. ಮತ್ತು ಬಿರ್ಲಾ ಕಂಪನಿ ಅವರ ನಡುವೆ ಯಾವ ತರಹದ ಒಪ್ಪಂದ ಆಗಿದೆ ಎಂಬುದರ ಕರಡು

ಪ್ರತಿಯನ್ನು ಈ ಸದನದ ಮುಂದೆ ಇಡುತ್ತೀರಾ ? ಅವರು ಇದನ್ನು ಮುಚ್ಚಿಕೊಂಡು ಹೋಗುವುದಕ್ಕೆ ಆಗುತ್ತದೆಯೋ ಇಲ್ಲವೋ ಎಂದು ಆಗ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇಲ್ಲದೇಹೋದರೆ ಗೊತ್ತಾಗುವುದಿಲ್ಲ. ಆದರ ಬಗ್ಗೆ ಮಾಹಿತಿಯನ್ನು ಟೇಬಲ್ ಮುಂದೆ ಇಡುತ್ತೀರಾ ? ಇನ್ನು ಎರಡನೆಯದು ಏನೆಂದರೆ, ಇವರು ಇವತ್ತಿನ ದಿವಸ ಮುಚ್ಚಿದರೂ ಮುಚ್ಚಬಹುದು ಎನ್ನುವ ಯೋಚನೆ ಇದೆ ಎಂದು ಹೇಳಿದರು. ಬಿಲ್ಲವರಿಗೆ ಆ ಯೋಚನೆ ಇರಬಹುದು. ಈ ಯೋಚನೆ ಇರಬೇಕಾದರೆ ನೀವು ಹೇಳಿದಹಾಗೆ ಅದನ್ನು ಕಾರ್ಯರೂಪಕ್ಕೆ ತರಬೇಕಾದರೆ ನೋಟಿಸನ್ನು ನಿಮಗೂ ಕೊಡಬೇಕು, ಅವರಿಗೂ ಕೊಡಬೇಕು. ಒಂದು ಥರ್ಮಲ್ ಪ್ಲಾಂಟ್ ಮುಚ್ಚಬೇಕಾದರೆ ನಿಮ್ಮ ಅಗ್ರಿಮೆಂಟ್‌ನಲ್ಲಿ ನೋಟೀಸ್ ಕೊಡಬೇಕು ಎಂದು ಇರಬಹುದಿಲ್ಲವೇ ? ಜನರಲ್ಲಾಗಿ ಆರೀತಿ ಇದ್ದೇ ಇರುತ್ತದೆ. ಆದರ ಬಗ್ಗೆ ಏನು ಹೇಳುತ್ತೀರಿ. ಆ ಯೋಚನೆ ಇದ್ದರೆ ಅದನ್ನು ಸರಿ ಮಾಡುವುದಕ್ಕೆ ತಾವು ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ಎನ್ನುವುದನ್ನು ಹೇಳಬೇಕು. ಇನ್ನು ಮೂರನೆಯದು, ಅವರು ಜನರೇಟರ್ಸ್ ಹಾಕಿಕೊಳ್ಳುವುದಕ್ಕೆ ಅವಕಾಶ ಹೇಗೆ ಮಾಡಿಕೊಟ್ಟಿರಿ. ಅವರೆದೇ ಥರ್ಮಲ್ ಪ್ಲಾಂಟ್ ಇದೆ, ಆ ಥರ್ಮಲ್ ಪ್ಲಾಂಟಿಗೆ ಎಲೆಕ್ಟ್ರಿಸಿಟಿ ಕೊಡುತ್ತಾರೆ, ಮತ್ತೆ ಮತ್ತೆ ಜನರೇಟಿಂಗ್ ಸೆಟ್ ಹಾಕಿದ್ದಾರೆ, ಆ ಜನರೇಟಿಂಗ್ ಸೆಟ್ ಹಾಕುವುದಕ್ಕೆ ಗವರ್ನಮೆಂಟ್‌ನವನು ಪರ್ಮಿಷನ್ ಕೊಡಬೇಕಾದರೆ, ಜನರೇಟಿಂಗ್ ಸೆಟ್ ಹಾಕಿಕೊಂಡಿದ್ದೀರಿ ಈ ವಿದ್ಯುಚ್ಛಕ್ತಿಯನ್ನು ನಾವು ಉಪಯೋಗಿಸಿತ್ತೇವೆ ಎನ್ನುವ ಮಾತು ಏನಾದರೂ ಬಂದಿದೆಯೇ ? ಆ ರೀತಿ ತಾವು ವ್ಯವಹಾರ ನಡೆಸಿದ್ದೀರಾ, ಆ ರೀತಿ ವ್ಯವಹಾರ ನಡೆಸದೇ ಹೋದರೆ ಈಗಲಾದರೂ ನಡೆಸಿ ಥರ್ಮಲ್ ಪ್ಲಾಂಟ್ ಮುಚ್ಚುದಹಾಗೆ ಮಾತ್ರ ಕೆಲಸಗಾರರು ಅಲ್ಲೇ ಇರುವ ಹಾಗೆ ತಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ನಾನು ಈಗಾಗಲೇ ಹೇಳಿದ್ದೇನೆ. ಅಗ್ರಿಮೆಂಟ್ ಅಂದರೆ ಅದು ತಾತ್ಕಾಲಿಕವಾಗಿ ಇರಬಹುದು ಅಥವಾ ಪರ್ಮನೆಂಟಾಗಿಯೂ ಇರಬಹುದು. ಈಗ ಎಂ.ಸಿ.ಎಫ್ ಕ್ಲೋಸ್ ಆಗಿತ್ತು. ಅಲ್ಲಿಂದ ಅನೇಕರಿಗೆ ವಿದ್ಯುತ್‌ನ್ನು ಕೊಂಡುಕೊಂಡು ಉಪಯೋಗಿಸುವುದಕ್ಕೆ ವೀಲಿಂಗ್ ಚಾರ್ಜ್ ಕೊಟ್ಟೆವು. ಎಂ.ಸಿ.ಎಫ್. ನವರು ಡೈರಕ್ಟಾಗಿ ಕಾಂಟಾಕ್ಟ್‌ಮಾಡಿ ಅವರಲ್ಲಿ ಪವರನ್ನು ಬೆಂಗಳೂರಿನಲ್ಲಿ ಉಪಯೋಗಿಸಿಕೊಳ್ಳುತ್ತಾ ಇದ್ದರು. ಅದೇರೀತಿ ಈಗ ವಾಡಿಯಲ್ಲಿರುವಂಥ ೧೦ ಮೆಗಾವಾಟ್ ಥರ್ಮಲ್ ಯೂನಿಟ್‌ನ್ನು ಹಾಕುವುದಕ್ಕೆ ಕಾರಣವೇನೆಂದರೆ, ಕೋಲ್ ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ಅನುಕೂಲವಾಗುತ್ತದೆ, ಕೋಲನ್ನು ಅವಶ್ಯಕ್ಕೆ ತರುವುದಕ್ಕೆ ಕಷ್ಟವಾಗುತ್ತದೆ ಎನ್ನುವ ದೃಷ್ಟಿಯಿಂದ ಅಷ್ಟು ದೂರದಲ್ಲಿ ಹಾಕಿದರು ಅದನ್ನು ಅವರು ಅಲ್ಲಿ ಹಾಕಿಕೊಂಡು ವೀಲಿಂಗ್ ಚಾರ್ಜಸ್ ಮಾತ್ರ ತೆಗೆದುಕೊಂಡು ರೂಪಿಸಿಕೊಳ್ಳುವುದಕ್ಕೆ ಅವಕಾಶ ಕೊಟ್ಟೆವು. ಈಗ ಅವರು ಕೆಲವು ಜನರೇಟಿಂಗ್ ಸೆಟ್ಟನ್ನು ಇಲ್ಲಿ ಹಾಕಿಕೊಳ್ಳುತ್ತೇವೆ ಎಂದು ಹೇಳಿದಾಗ, ವೀಲಿಂಗ್ ಚಾರ್ಜ್ ಬರುವುದಿಲ್ಲ, ಆಪರು ಸ್ವಂತ ಕೆಪಾಸಿಟಿಯಿಂದ ಇಂಪ್ರೂವ್‌ಮೆಂಟ್ ಮಾಡಿಕೊಳ್ಳುವ ದೃಷ್ಟಿಯಿಂದ ಸ್ವಂತ ಸೆಟ್ ಹಾಕಿಕೊಂಡರೆ, ಯಾರುಬೇಕಾದರೂ ಹಾಕಿಕೊಳ್ಳಬಹುದು. ಅದಕ್ಕೆ ನಾವು ಅವಕಾಶ ಮಾಡಿಕೊಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಕೇಳಿದ ಪ್ರಶ್ನೆಗೆ ಉತ್ತರ ಬರಲಿಲ್ಲ. ಈ ವಿಷಯದಲ್ಲಿ ನಿವಂಗೂ ಆವರಿಗೂ ಒಪ್ಪಂದ ಆಗಿರುತ್ತದೆ. ಅವರು ಥರ್ಮಲ್ ಪ್ಲಾಂಟ್ ಹಾಕಿಕೊಳ್ಳುತ್ತಾರೆ, ಜನರೇಟಿಂಗ್ ಸೆಟ್ಸ್ ಹಾಕಿಕೊಳ್ಳುತ್ತಾರೆ, ಅದಕ್ಕೆ ಎಲೆಕ್ಟ್ರಿಸಿಟಿಬೇಕು, ಅದನ್ನು ಯಾವರೀತಿ ಕೊಡುತ್ತೀರಿ, ಯಾವ ಆಧಾರದ ಮೇಲೆ ಕೊಡುತ್ತೀರಿ ? ಎಷ್ಟು ಕೊಡುತ್ತೀರಿ ಎನ್ನುವುದಕ್ಕೆ ಏನು ಅಗ್ರಿಮೆಂಟ್ ಕಾಪಿ ಇದೆ ಅದನ್ನು ದಯವಿಟ್ಟು ಟೇಬಲ್ ಮೇಲೆ ಇಡಿ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಅವರು ಜನರೇಟರ್ ಮಾಡಿದಷ್ಟು ವಿದ್ಯುತನ್ನು ನಾವು ಅಲ್ಲೇ ಉಪಯೋಗಿಸಿಕೊಂಡು ಅದನ್ನು ವೀಲ್ ಮಾಡಿ ಇಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಕೊಡುತ್ತಿದ್ದೆವು. ಅದೇ ವಿಷಯಕ್ಕೋಸ್ಕರ ಎಂ.ಸಿ.ಎಫ್. ಉದಾಹರಣೆ ಕೊಟ್ಟಿದ್ದು. ತಾತ್ಕಾಲಿಕವಾಗಿ ಒಂದು ತಿಂಗಳು ನಮಗೆ ಇಷ್ಟು ವೀಲ್ ಮಾಡಿಕೊಡಿ, ಇಷ್ಟ ಪವರ್ ಅಂದರೆ ಅದನ್ನು ಮಾಡಿ ಕೊಡುತ್ತೇವೆ ನಾವು. ಇದು ಶಾಶ್ವತವಾದಂಥ ಅಗ್ರಿಮೆಂಟ್ ಅಂದರೆ, as long as they produce we will wheel it.

SRI M. S. KRISHNAN.—I don't want your overall reply. If there is any agreement you place it on the table of the House.

ಶ್ರೀ ಲಕ್ಷ್ಮೀನರಸಿಂಹಯ್ಯ.—ಆ ರೀತಿ ೧೯೭೯ರಲ್ಲಿ ಅಗ್ರಿಮೆಂಟ್ ಏನಾದರೂ ಇದ್ದರೆ ಆದರಲ್ಲಿ ಜನರಲ್ ಕಂಡೀಷನ್ ಇರುತ್ತದೆ. ನೀವು ಅಲ್ಲಿ ಜನರೇಟ್ ಮಾಡುತ್ತೀರಿ, ವೀಲಿಂಗ್ ಚಾರ್ಜ್ ಇಷ್ಟು ಕೊಡಬೇಕು, ಟ್ಯಾಕ್ಸ್ ಇಷ್ಟು ಕೊಡಬೇಕು, ಈ ರೀತಿ ಪವರ್ ಸಪ್ಲೈ ಮಾಡುತ್ತೇವೆ ಅವ್ಯೂಸಂದ್ರದಲ್ಲಿ ಎಂದು ಅಗ್ರಿಮೆಂಟ್ ಇದ್ದರೆ ಆದರ ಕಾಪಿಯನ್ನು ಒದಗಿಸಿಕೊಡುತ್ತೇನೆ ಅಥವಾ ಅದನ್ನು ಸಭೆಯ ಮುಂದೆ ಇಡುತ್ತೇನೆ. ಆದರಲ್ಲಿ ಹೈಡ್ ಅಂಡ್ ಸಿಕ್ ಏನೂ ಇಲ್ಲ. ಅದನ್ನು ಕ್ಲೋಸ್ ಮಾಡದೇ ಇರುವುದಕ್ಕೆ ಅವರು ಕೊಟ್ಟಿರತಕ್ಕಂಥ ಎರಡು ಕಾರಣ ಇದೆ. ಒಂದು ಪೊಲ್ಯೂಷನ್ ಎಂದು ಅವರು ಹೇಳಿದ್ದಾರೆ. ಪೊಲ್ಯೂಷನ್ ಬಗ್ಗೆ ಸಾಮಾನ್ಯವಾಗಿ ಸುತ್ತಮುತ್ತ ಇರುವುದರಿಂದ ದೂರು ಬಂದಾಗ ಅದನ್ನು ಕಡಿಮೆ ಮಾಡುವುದಕ್ಕೆ ಅಥವಾ ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕಾದ್ದು ಅವರ ಜವಾಬ್ದಾರಿ. ಅದರ ಬಗ್ಗೆ ಸಂಪೂರ್ಣವಾಗಿ ಪೊಲ್ಯೂಷನ್ ಬೋರ್ಡ್‌ನವರು ಏನು ನೋಟೀಸ್ ಕೊಟ್ಟಿದ್ದಾರೆ, ಏನು ಮಾಡಿದ್ದಾರೆ ಎನ್ನುವುದನ್ನು ತಿಳಿದುಕೊಂಡು ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಜೊತೆಗೆ ವೀಲಿಂಗ್ ಮಾಡಿಕೊಡುವುದಕ್ಕೆ ಯಾವರೀತಿ ಅಡ್ಡಿಆಡಚಣೆಗಳು ಇಲ್ಲ, ಅಥವಾ ಅವರು ಇಲ್ಲಿ ಜನರೇಟ್ ಮಾಡತಕ್ಕಂಥಾದ್ದೇ ಸಾಕು ಪವರ್ ಬೇಕಾಗಿಲ್ಲ ಎಂದರೆ ಅವರು ಜನರೇಟ್‌ಮಾಡಿ ನಮಗೆ ಕೊಟ್ಟರೆ ನಾವೇ ಕೊಂಡುಕೊಳ್ಳುವುದಕ್ಕೂ ಕೂಡ ತಯಾರಾಗಿದ್ದೇವೆ. ಅದಕ್ಕೋಸ್ಕರ ಕ್ಲೋಸ್ ಮಾಡತಕ್ಕ ಪ್ರಶ್ನೆ ಬರುವುದಿಲ್ಲ. ಇದು ಬಳಕೆ ಹಳೆಯದಾಗಿದೆ. ಏಕನಾಮಿಕ್ ಆಗಿ ಜನರೇಟರ್ ಮಾಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ರಿಪೇರಿ ಮಾಡಿ ಮಾಡುವುದಕ್ಕೆ ಸಾಧ್ಯವೆ ಎಂಬುದನ್ನು ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀ ಕೆ. ಬಿ. ಶಾನಪ್ಪ.—ಅಲ್ಲಿ ಎರಡು ಜನರೇಟರ್ಸ್ ಇದೆ.

ಅಧ್ಯಕ್ಷರು.—ಒಂದೇ ಸಾರಿ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡಬೇಕೆಂದು ರೂಲ್ ಇದೆ.

ಶ್ರೀ ಕೆ. ಬಿ. ಶಾನಪ್ಪ.—ನಿನ್ನೆ ಮೊನ್ನೆ ಚೆನ್ನಾಗಿದ್ದಿರಿ. ಇವತ್ತು ಏತಕ್ಕೆ ಭಯಂಕರವಾಗಿ ಬೆನ್ನು ಹತ್ತಿದ್ದೀರಿ. ಸ್ವಲ್ಪ ದಯಮಾಡಿ ಅವಕಾಶ ಮಾಡಿಕೊಡಿ

ಅಧ್ಯಕ್ಷರು.—ಈ ಕಾಲಿಂಗ್ ಅಟೆನ್‌ಷನ್ಸ್ ಇವೆ. ಸಮಯವನ್ನು ದುರುಪಯೋಗ ಮಾಡಿಕೊಳ್ಳಬೇಡಿ.

ಶ್ರೀ ಕೆ. ಬಿ. ಶಾನಪ್ಪ.—೧೫೦-೨೦೦ ಜನ ಸಾಯುತ್ತಿದ್ದಾರೆ. ಒಂದೇ ಜನರೇಟರ್ ನಡೆಸುತ್ತಿದ್ದಾರೆ. ೧೯೭೨ರಲ್ಲಿ ಥರ್ಮಲ್ ಪ್ಲಾಂಟ್‌ನವರಿಗೆ ೯ ಲಕ್ಷ ೨೫ ಸಾವಿರ ರೂಪಾಯಿ ಸರ್ಕಾರದವರು ಕೊಟ್ಟಿದ್ದಾರೆ. ಯಾವ ಲೆಕ್ಕದಲ್ಲಿ ಕೊಟ್ಟಿದ್ದೀರಿ. ಇದು ೩ ಕೋಟಿ ರೂಪಾಯಿ ಪ್ರಾಜೆಕ್ಟ್. ಪಕ್ಕದಲ್ಲಿ ಪಂ ಸಿ ಸಿ ಯವರು ಇದ್ದ ಅದನ್ನು ಕೊಳ್ಳುವುದಕ್ಕೆ ತಯಾರಿದ್ದಾರೆ, ಇಷ್ಟು ಕೆಲಸ ಮಾಡುವಂಥ ೧೫೦-೨೦೦ ಜನ ಕೆಲಸಗಾರರಿಗೆ ಪರ್ಮಿನೆಂಟ್ ಎಂಪ್ಲಾಯ್‌ಮೆಂಟ್ ಬಗ್ಗೆ ಗ್ಯಾರೆಂಟಿ ಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಕೆ. ಇ. ಬಿ. ಯವರು ಅದನ್ನು ಕೊಂಡುಕೊಳ್ಳುವುದಕ್ಕೆ ತಯಾರಿದ್ದಾರೆ. ವಾಪಸಿಲ್ಲರಿಗಾಗಿ ಸಿವಿಲ್ ಕಾರ್ಯವನ್ನು ಮಾಡಿದ್ದಾರೆ. ೬,೦೦೦ ಜನ ನೌಕರರು ಕಳೆದ ಎರಡು ವರ್ಷಗಳಿಂದ ಕೆಲಸ ಇಲ್ಲದೇ ಇದ್ದಾರೆ. ಅಲ್ಲಿ ಕೂಡ ಪವರ್ ಡಿಸೆಕನಕ್ಟ್ ಮಾಡಬೇಕು. ಕಾಲೋನಿಯವರಿಗೆ ಸುಮಾರು ೬-೭ ಲಕ್ಷ ರೂಪಾಯಿ ಹಾಗೆ ನಿಂತಿದೆ. ಮಾನವೀಯತೆಯಿಂದ ಡಿಸ್‌ಕನೆಕ್ಟ್ ಮಾಡಿಲ್ಲ. ಕೇಂದ್ರಸರ್ಕಾರದ ಜೊತೆ, ಐ.ಡಿ.ಬಿ.ಐ. ನವರ ಜೊತೆಗೆ ಮಾತುಕತೆ ಮಾಡಿ, ೩೧ ಕೋಟಿ ಹಣ ಕೊಟ್ಟು ಕೆಳವರ್ಗದ ಬಾಯ್ಲರ್‌ಗಳನ್ನು ತಯಾರು ಮಾಡುವುದಕ್ಕೆ ಪರವಾಗಿ ಸಿಕ್ಕಿದೆ ಎಂದು ನನಗೆ ತಿಳಿದು ಬಂದಿದೆ. ಅದೇ ರೀತಿ ಬಿ.ಬಿ.ಎಲ್.ನವರು ಪ್ರಾರಂಭ ಮಾಡಿದರೂ ಬೇಕಾದಷ್ಟು ಪವರ್ ಬೇಕಾಗುತ್ತದೆ ಇದರ ಬಗ್ಗೆ ಪೂರ್ಣವಾಗಿ ಪರಿಶೀಲನೆ ಮಾಡಿ, ಯಾವರೀತಿ ಇದನ್ನು ಉಳಿಸಿಕೊಳ್ಳಬೇಕೆಂಬುದನ್ನು ಯೋಚನೆ ಮಾಡಲಾಗುವುದು.

ನಿಯಮ : ಸಿಪಿಲರ ಮೇರೆಗೆ

ಅಧ್ಯಕ್ಷರು.—ಕಲ್ಯಾಣರಾವ್ ಪೊಳೆಕೇರಿ, ಅಬ್ಸೆಂಟ್, ಶಿವಾನಂದ ಹೆಚ್. ಕೌಜಲಗಿ ಅಬ್ಸೆಂಟ್, ಶರಣಬಸಪ್ಪ ಮಾಲಿ ಪಾಟೀಲ್ ಅಬ್ಸೆಂಟ್ಸ್, ವಸಂತ ಬಂಗೇರಾ ಅಬ್ಸೆಂಟ್.